ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 ದಿನಾಂಕ: 08–09–2015

# ಪತ್ರಿಕಾ ಪ್ರಕಟಣೆ

## ಕಾರ್ಮಿಕರ ಮಕ್ಕಳ ಶೈಕ್ಷಣಿಕ ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಸೆಪ್ಟೆಂಬರ್ 8 (ಕರ್ನಾಟಕ ವಾರ್ತೆ

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯು 2015–16 ನೇ ಸಾಲಿಗೆ ರಾಜ್ಯದ ವಂತಿಗೆ ಪಾವತಿಸುವ ಕಾರ್ಮಿಕರ ಅರ್ಹ ಮಕ್ಕಳಿಂದ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ಹಿಂದಿನ ಸಾಲಿನಲ್ಲಿ ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಶೇಕಡ 50 ರಷ್ಟು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ಶೇಕಡ 45 ರಷ್ಟು ಅಂಕ ಪಡೆದು ಹಿಂದಿನ ಸಾಲಿನಲ್ಲಿ ತೇರ್ಗಡೆ ಹೊಂದಿರಬೇಕು. 2015–16 ನೇ ಸಾಲಿನಲ್ಲಿ ಪದವಿ, ಸ್ನಾತಕೋತ್ತರ ಪದವಿ, ಇಂಜೀನಿಯರಿಂಗ್, ವೈದ್ಯಕೀಯ ಹಾಗೂ ಪದವಿಗೆ ತತ್ಸಮಾನವಾದ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮಾತ್ರ ಈ ಕೆಳಗೆ ತಿಳಿಸಿರುವ ಕೊನೆಯ ದಿನಾಂಕದೊಳಗೆ ಅರ್ಜಿ ಸಲ್ಲಿಸಬೇಕಾಗಿರುತ್ತದೆ.

ತಂದೆ/ತಾಯಿ/ಪೋಷಕರ ಮಾಸಿಕ ಸಂಬಳ ರೂ. 15,000/– ಗಳು ಮೀರದಂತಹ, ಹಾಗೂ ಮಂಡಳಿಗೆ ವಂತಿಗೆ ಪಾವತಿಸುವ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರ ಮಕ್ಕಳು ಮಾತ್ರ ಈ ಯೋಜನೆಯಡಿಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಮಂಡಳಿಯ ವೆಬ್ ಸೈಟ್ www.klwb.kar.com ನಲ್ಲಿ ಅರ್ಜಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಭರ್ತಿಮಾಡಿದ ಅರ್ಜಿಗಳನ್ನು, ಸೂಕ್ತ ದಾಖಲೆಯೊಂದಿಗೆ, ಕಲ್ಯಾಣ ಆಯುಕ್ತರು, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಕಾರ್ಮಿಕ ಕಲ್ಯಾಣ ಭವನ, ನಂ 48, 2ನೇ ಮಹಡಿ, ಮತ್ತಿಕೆರೆ ಮುಖ್ಯರಸ್ತೆ, ಯಶವಂತಪುರ, ಬೆಂಗಳೂರು – 560 022, ಇವರಿಗೆ ದಿನಾಂಕ: 30–9–2015 ರಂದು ಸಂಜೆ 5–30 ಗಂಟೆಯೊಳಗಾಗಿ ತಲುಪುವಂತೆ ಕಳುಹಿಸಬೇಕು. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ, ಕಲ್ಯಾಣ ಆಯುಕ್ತರು, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಕಾರ್ಮಿಕ ಕಲ್ಯಾಣ ಭವನ, ನಂ 48, 2ನೇ ಮಹಡಿ, ಮತ್ತಿಕೆರೆ ಮುಖ್ಯರಸ್ತೆ, ಯಶವಂತಪುರ, ಬೆಂಗಳೂರು – 560 022, (ದೂರವಾಣಿ ಸಂಖ್ಯೆ 080–23570266) ಹಾಗೂ ಆಯಾಯಾ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳು, ತಾಲ್ಲೂಕು ಕೇಂದ್ರದಲ್ಲಿರುವ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರ ಕಚೇರಿಗಳನ್ನು ನೇರವಾಗಿ ಸಂಪರ್ಕಿಸಬಹುದಾಗಿದೆ.

ಪಲ್ಲವಿ:ಬಾಬು:ಜಿಪಿಆರ್.

# APPLICATION INVITED

Bangalore, September 8 (Karnataka Information)

The Karnataka Labour Welfare Board, Bangalore invites applications from the eligible children of the workers for Incentive money given to the meritorious students for the year 2015-16.

The students who have passed in the previous examinations with 50% for General and 45% SC/ST students and who are persuing in the academic year 2015-16, as graduate, postgraduate , Engineering, Medical or other equivalent degree are eligible Also those who are working in organisations that are paying contribution to the Karnataka welfare Fund and whose parents'/guardians' monthly income doesnot exceed Rs. 15,000/- are eligible to apply under this scheme.

Applications are available with web site www.klwb.kar.com. The duly filled application forms have to be submitted to the Welfare Commissioner, Karnataka Labour Welfare Board, Karmikra Kalyana Bhavan, No. 48, 2nd Floor, Mathikere Main Road, (Near R.T.O Office) Yashavanthapur, Bangalore – 560 052, on or before 30-09-2015. The application forms received after the due date will not be considered.

For more details students may contact Welfare Commissioner, Karnataka Labour Welfare Board, Karmika Kalyana Bhavana, No 48, IInd Floor, Mathikere Main Road, (Near R.T.O. Office) Yeshwanthpur, Bangalore – 560 022 (Phone No.

080-23570266) or Labour Officers of the concerned districts. Senior Labour Inspectors /Labour Inspectors' office of the concerned taluk.

pallavi:babu:gpr.

## ಗೆಜೆಟೆಡ್ ಪ್ರೊಬೆಷನರ್ಸ್ : ಮುಖ್ಯ ಪರೀಕ್ಷೆ

**ಬೆಂಗಳೂರು, ಸೆಪ್ಟೆಂಬರ್ 8 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ಸೆಪ್ಟೆಂಬರ್ 18 ರಿಂದ ಸೆಪ್ಟೆಂಬರ್ 22 ರವರೆಗೆ ನಡೆಸುವ 2014 ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಮುಖ್ಯ ಪರೀಕ್ಷೆಗೆ ಅರ್ಹರಾದವರ ಪ್ರವೇಶ ಪತ್ರವನ್ನು ಆಯೋಗದ ವೆಬ್‌ಸೈಟ್ http://kpsc.kar.nic.in ನಿಂದ ತಮ್ಮ ಪೂರ್ವಭಾವಿ ಪರೀಕ್ಷೆಯ ನೋಂದಣಿ/ಅರ್ಜಿಯ ಐ.ಡಿ. ಸಂಖ್ಯೆ ಮತ್ತು ಜನ್ಮ ದಿನಾಂಕವನ್ನು ನಮೂದಿಸಿ ಡೌನ್‌ಲೋಡ್ ಮಾಡಿಕೊಳ್ಳಬಹುದೆಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಪಲ್ಲವಿ:ಬಾಬು:ಜಿಪಿಆರ್.

## GAZETTED PROBATIONERS MAIN EXAMINATION

Bangalore, September 8 (Karnataka Information)

The Admission Tickets of eligible candidates for Gazetted Probationers Main Examination 2014 to be held from 18-09-2015 to 22-09-2015 may be downloaded from the Karnataka Public Service Commission's website http://kpsc.kar.nic.in by entering the candidates' Preliminary Register/Application I.D. Number and date of birth.

pallavi:babu:gpr.

## ಬೆಳ್ಳಿ ಹೆಜ್ಜೆ – ಈ ಬಾರಿ ಎಂ. ಎನ್. ಕುಮಾರ್

**ಬೆಂಗಳೂರು, ಸೆಪ್ಟೆಂಬರ್ 8 (ಕರ್ನಾಟಕ ವಾರ್ತೆ)**

ಕರ್ನಾಟಕ ಚಲನಚಿತ್ರ ಅಕಾಡೆಮಿಯು ನಡೆಸಿಕೊಡುವ ಕನ್ನಡ ಚಲನಚಿತ್ರರಂಗದ ದಿವ್ಯ ಚೇತನಗಳೊಡನೆ ನಡೆಸುವ ಬೆಳ್ಳಿಹೆಜ್ಜೆ ಕಾರ್ಯಕ್ರಮದಲ್ಲಿ ಈ ಬಾರಿ ಮೂವತ್ತೈದು ಹೆಚ್ಚು ಚಿತ್ರಗಳ ನಿರ್ಮಾತೃ ಎಂ.ಎನ್. ಕುಮಾರ್ ಅವರೊಂದಿಗೆ ಮುಖಾಮುಖಿ ನಡೆಯಲಿದೆ ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್. ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಬೆಂಗಳೂರಿನ ಕುಮಾರಪಾರ್ಕ್ ರಸ್ತೆಯ ಗಾಂಧೀ ಭವನದಲ್ಲಿರುವ ಮಹದೇವ ದೇಸಾಯಿ ಸಭಾಂಗಣದಲ್ಲಿ ಸೆಪ್ಟೆಂಬರ್ 11 ರಂದು ಸಂಜೆ 5-00 ಗಂಟೆಗೆ ನಡೆಯುವ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಎಸ್. ವಿ. ರಾಜೇಂದ್ರ ಸಿಂಗ್ ಬಾಬು ಅವರು ವಹಿಸುವರು. ಮುಖ್ಯ ಅತಿಥಿಗಳಾಗಿ ಕನ್ನಡ ಚಲನಚಿತ್ರರಂಗದ ಹಿರಿಯ ನಟ ದೇವರಾಜ್, ಚಲನಚಿತ್ರ ನಿರ್ದೇಶಕರು ಹಾಗೂ ಪತ್ರಕರ್ತರಾದ ಇಂದ್ರಜಿತ್ ಲಂಕೇಶ್ ಪಾಲ್ಗೊಳ್ಳುವರು ಹಾಗೂ ವಿಶೇಷ ಆಹ್ವಾನಿತರಾಗಿ ಕರ್ನಾಟಕ ಚಲನ ವಾಣಿಜ್ಯ ಮಂಡಳಿಯ ಅಧ್ಯಕ್ಷ ಥಾಮಸ್ ಡಿಸೋಜ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್.ಆರ್. ವಿಶುಕುಮಾರ್ ಅವರು ಆಗಮಿಸುವರು ಎಂದು ಹೆಚ್. ಬಿ. ದಿನೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನುಮಪ ಸಾಧಕ – ಎಂ.ಎನ್. ಕುಮಾರ್ ಕುರಿತಂತೆ ..................................

35 ಕ್ಕೂ ಹೆಚ್ಚು ಚಿತ್ರಗಳ ನಿರ್ಮಾಣ – 160 ಕ್ಕೂ ಹೆಚ್ಚು ಚಿತ್ರಗಳ ವಿತರಣೆ – ಪ್ರದರ್ಶಕರ ವಿಭಾಗದಲ್ಲಿ ಮೇಲುಗೈ – ಸಾಕಲ್ಲ ಸಾಧಕರೊಬ್ಬರ ಸಾಧನೆ ದಾಖಲಿಸಲು. ತುಂಬ ಸಂಕೀರ್ಣವಾದ ಚಲನಚಿಗತ್ರ ನಿರ್ಮಾಣ, ಅಪಾರ ತಾಳ್ಮೆ – ಲೆಕ್ಕಾಚಾರ – ಮುಂದಾಲೋಚನೆ – ಚಿತ್ರರಂಗದ ಕುರಿತ ತಿಳುವಳಿಕೆ – ಎಲ್ಲಕ್ಕಿಂತ ಮಿಗಿಲಾಗಿ ದೃಶ್ಯಲೋಕದಲ್ಲಿ ಅದೃಶ್ಯವಾಗಿಯೇ ಅದೃಷ್ಟ ಅರಸುವ ಎದೆಗಾರಿಕೆಯನ್ನು ಬೇಡುವಂತಹುದು. ಇಲ್ಲಿ ಅಪರಾ ಜ್ಞಾನ ಬೇಕು. ಅಸೀಮ ಸಾಹಸಿಯೂ ಆಗಿರಬೇಕು. ಎಂ>ಎನ್. ಕುಮಾರ್ ಇಂತಹ ಸಾಹಸಿ.

ಬಟ್ಟೆ ಅಂಗಡಿಯಲ್ಲಿ ಸಹಾಯಕವಾಗಿ ವೃತ್ತಿ ಬದುಕು ಆರಂಭಿಸಿ "ಶ್ರೀ ಲಕ್ಷ್ಮಿ ಫಿಲಂಸ್" ಎನ್ನುವ ಪ್ರತಿಷ್ಠಿತ ಚಲನಚಿತ್ರ ಸಂಸ್ಥೆಯನ್ನು ಕಟ್ಟುವವರೆಗೆ, 7 ನೇ ಇಯತ್ತೆ ಪಾಸು ಮಾಡಿದ ಕುಮಾರ್ ಕ್ರಮಿಸಿದ ಹಾದಿ ನಿಶ್ಚಯವಾಗಿಯೂ ಬಿಸಿನೆಸ್ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳಿಗೆ ಆಪೇಕ್ಷಣೀಯ ಪಠ್ಯವಾಗಬಹುದು. ಮಂಡ್ಯದ ಹಳ್ಳಿ ಸೀಮೆಯ ಮಹದೇವಮ್ಮ – ನಂಜಪ್ಪ ದಂಪತಿಯ ಈಪುತ್ರ ತಮ್ಮ 25 ನೇ ವಯಸ್ಸಿಗೆ ಚಿತ್ರ ನಿರ್ಮಾಣ ಪ್ರಾರಂಭಿಸಿದರು. 30ನೇಯ ವಯಸ್ಸಿಗೆ "ಶ್ರೀ ಲಕ್ಷ್ಮಿ ಫಿಲಂಸ್" ಹುಟ್ಟು ಹಾಕಿದವರು. 35 ವರ್ಷಗಳ ಕಾಲ ಚಿತ್ರೋದ್ಯಮವೆಂಬ ಸಾಗರದಲ್ಲಿ ಈಜುತ್ತಾ ಕನ್ನಡ ಚಿತ್ರರಂಗ ಕಟ್ಟಿದವರು. ಮುಳುಗುವಂತಾದಾಗಲೂ ಮೈ ಕೊಡವಿ ಎದ್ದು ಬಂದು ಜಯಸಾಧಿಸಿದವರು. ಮತ್ತೆ ಮತ್ತೆ ಕನ್ನಡದ ಕೆಲಸಕ್ಕೆ ಮನಗೊಟ್ಟವರು. ತಮ್ಮ ಜೊತೆಯಲ್ಲಿಯೇ ಸಂಗೀತ ನಿರ್ದೇಶಕ ಎಂ.ಎನ್. ಕೀರ್ವಾಣಿ. ನಿರ್ದೇಶರುಗಳಾದ ಹೆಚ್. ಮಾಪಿಶ್, ವಾಸು, ಎಂ.ಎಸ್. ರಮೇಶ್, ಮಹೇಶ್ ಬಾಬು ಮೊದಲಾದವರ ಬೆಳವಣಿಗೆಗೆ ಮೆಟ್ಟಿಲಾದವರು.

'ಅಶೋಕ ಚಕ್ರ', 'ಭೈರವ', 'ಮೋಜುಗಾರ – ಸೊಗಸುಗಾರ', 'ಅಳೀಮಯ್ಯ' ' ಪೋಲೀಸ್ ಬೆಲ್ಟ್' 'ಮಾಣಿಕ್ಯ' ಮೊದಲಾದ 30 ಕ್ಕೂ ಹೆಚ್ಚು ಚಿತ್ರಗಳ ನಿರ್ಮಾಪಕ ಎಂ.ಎಂ. ಕುಮಾರ್, ಛಲದಂಕ ಮಲ್ಲ. ಕನ್ನಡ ಚಿತ್ರಗಳ ಇತಿ–ಮಿತಿಯ ಕುರಿತು. ಅನ್ಯಭಾಷಾ ಚಿತ್ರಗಳನ್ನೆದುರಿಸಬೇಕಾದ ಕನ್ನಡದ ಸವಾಲಿನ ಕುರಿತು. ಕನ್ನಡದ ಸಿನಿಮಾಗಳ ಕುರಿತು ಅಧಿಕೃತವಾಗಿ ಮಾತನಾಡಬಲ್ಲ ಶ್ರೀ ಎಂ.ಎನ್. ಕುಮಾರ್ ಸೋಲಿಗೆ ಎದೆಯೊಡ್ಡಿಯೂ ಜಯವನ್ನೊಲಿಸಿಕೊಂಡ ಅಸೀಮ ಸಾಹಸಿ.

ಪಲ್ಲವಿ:ಬಾಬು:ಜಿಪಿಆರ್.